Online Newspaper Clipping Service

**Dated, Monday, 09th January – 2017**

**Pg.No.0l**

ಸಂಯುಕ್ತ ಕರ್ನಾಟಕ

# ದೇಹದಾನ ಮಾಡಿ ಸಮಾಜಕ್ಕೆ ಮಾದರಿಯಾದ ವೆಂಕಟಪ್ಪ



ಚಿಂತಾಮಣಿ: ಮನುಷ್ಯ ನಿಧನ ನಂತರ ಪಂಚಭೂತಗಳಲ್ಲಿ ಲೀನವಾಗುವ ಮೂಲಕ ಅಸ್ತಂಗತನಾಗುತ್ತಾನೆ. ಅದಕ್ಕೂ ಮುನ್ನ ವೈದ್ಯಕೀಯ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ವಾದರೆ ಭವಿಷ್ಯದಲ್ಲಿ ಮನುಷ್ಯನ ಜೀವನಕ್ಕೇನೇ ಹಿತವೆಂದು ನಂಬಿದ್ದ ಮೈಲಾಂಡ್ಲಹಳ್ಳಿಯ ವೆಂಕಟಪ್ಪ (75) ತನ್ನ ನಿಧನ ನಂತರ ದೇಹವನ್ನು ಕೋಲಾರದ ಮೆಡಿಕಲ್ ಕಾಲೇಜಿಗೆ ದಾನ ಮಾಡುವ ಮೂಲಕ ಸಾರ್ಥಕತೆ ಮೆರೆದಿದ್ದಾರೆ. ಬೆಸ್ಕಾಂ ಕಛೇರಿಯಲ್ಲಿ ಚೀಫ್ ಅಕೌಂಟ್ಸ್ ಆಫೀಸರ್ ಆಗಿದ್ದು 15 ವರ್ಷ ಹಿಂದೆ ನಿವೃತ್ತರಾಗಿದ್ದ ವೆಂಕಟಪ್ಪ ನಂತರವೂ ಗುತ್ತಿಗೆ ಆಧಾರದಡಿಯೂ ಅದೇ ಬೆಸ್ಕಾಂನಲ್ಲಿ ಲೆಕ್ಕಪತ್ರ ವಿಭಾಗದಲ್ಲಿ ನಿಧನದ ದಿನದವರೆವಿಗೂ ಕಾರ್ಯನಿರ್ವಹಿಸುವ ಮೂಲಕ "ನಿವೃತ್ತಿ" ಎಂದರೆ ಕಾಲಾಹರಣ ಜೀವನ ಎಂಬುದಕ್ಕೆ ಹೊರತಾದ ಜೀವನ ಶೈಲಿ ರೂಪಿಸಿಕೊಂಡಿದ್ದರು.

ಶನಿವಾರ ವೆಂಕಟಪ್ಪ ನಿಧನಗೊಂಡ ನಂತರ ಅವರ ಆಶಯದಂತೆ ಮಕ್ಕಳಾದ ಎಂ.ವಿ.ವೆಂಕಟೇಶ್, ಎಂ.ವಿ.ನರೇಂದ್ರಬಾಬು, ಎಂ.ವಿ.ಮಂಜುಳಾ, ಅಳಿಯ ಎಸ್.ಪ್ರಕಾಶ್ ಅವರುಗಳು ಮೃತದೇಹಕ್ಕೆ ಸಂಪ್ರದಾಯದಂತೆ ವಿಧಿವಿಧಾನಗಳನ್ನು ನೆರವೇರಿಸಿದ ನಂತರ ಜಾಲಪ್ಪ ಮೆಡಿಕಲ್ ಕಾಲೇಜಿಗೆ ಒಪ್ಪಿಸಿದ್ದಾರೆ. ಗಾಣಿಗ ಸಮಾಜದ ಹಿರಿಯ ಮುಖಂಡರಾಗಿದ್ದ ಹಾಗೂ ಸಿ.ಭೈರೇಗೌಡರ ನಿಕಟವರ್ತಿಗಳಲ್ಲಿ ಒಬ್ಬರಾಗಿದ್ದ ವೆಂಕಟಪ್ಪ ನಿಧನಕ್ಕೆ ಡಾ:ರಾಮಚಂದ್ರಗೌಡ, ಗೋಪಸಂದ್ರ ಶ್ರೀನಿವಾಸರೆಡ್ಡಿ, ಕೆಂದನಹಳ್ಳಿ ಬಿ.ಸಿ. ಶ್ರೀರಾಮಪ್ಪ, ಹೊಸೂರು ಅಂಜಪ್ಪ, ಮೈಲಾಂಡ್ಲಹಳ್ಳಿ ಅಶ್ವತ್ಥಪ್ಪ, ಕ್ಯಾಸಂಬಳ್ಳಿ ವೆಂಕಟೇಶ್, ಕುರುಟಹಳ್ಳಿ ರಾಧಾಕೃಷ್ಣ, ಕೃಷ್ಣಮೂರ್ತಿ, ನಗರಸಭೆ ಮಾಜಿ ಅಧ್ಯಕ್ಷ ಎಂ.ಎಸ್.ವೆಂಕಟರೆಡ್ಡಿ, ಸೇತುಮಾಧವನ್, ಸುರೇಶ್, ವಿ.ಎಲ್.ನರಸಿಂಹಮೂರ್ತಿ ಕಂಬನಿ ಮಿಡಿದಿದ್ದಾರೆ.